# ECHO OF HIS CALL

## ಕರೆಯ ಪ್ರತಿಧ್ವನಿ

KANNADA

India's National Spiritual Newspaper

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

Editor : S. SAM SELVA RAJ | 16 Languages | Associate Editor : Rev. R. Rama Krishna

Vol. XXVIII | YEAR OF OUR LORD JESUS CHRIST, 2026 FEBRUARY | No.01


## ಪರಿಶುದ್ಧ ಸತ್ಯವೇದ

ದಯಮಾಡಿ ಈ ಕೆಳಗಿನ ವಚನಗಳನ್ನು **ಕಂಠಪಾಠ ಮಾಡಿರಿ.**

**ಕೀರ್ತನೆ 34:15-22**

15. ಯೆಹೋವನು ನೀತಿವಂತರನ್ನು ಕಟಾಕ್ಷಿಸುತ್ತಾನೆ; ಅವರು ಮೊರೆಯಿಡುವಾಗ ಕಿವಿಗೊಡುತ್ತಾನೆ.
16. ಕೆಡುಕರಿಗೋ ಯೆಹೋವನು ಕೋಪದ ಮುಖವುಳ್ಳವನಾಗಿರುವನು. ಲೋಕದಲ್ಲಿ ಅವರ ನೆನಪೇ ಉಳಿಯದಂತೆ ತೆಗೆದು ಹಾಕುವನು.
17. ಯೆಹೋವನು ನೀತಿವಂತರ ಕೂಗನ್ನು ಕೇಳಿ ಎಲ್ಲಾ ಕಷ್ಟಗಳಿಂದ ಅವರನ್ನು ಬಿಡಿಸುತ್ತಾನೆ.
18. ಮುರಿದ ಮನಸ್ಸುಳ್ಳವರಿಗೆ ಯೆಹೋವನು ನೆರವಾಗುತ್ತಾನೆ; ಕುಗ್ಗಿ ಹೋದವರನ್ನು ಉದ್ಧಾರ ಮಾಡುತ್ತಾನೆ.
19. ನೀತಿವಂತನಿಗೆ ಸಂಭವಿಸುವ ಕಷ್ಟಗಳು ಅನೇಕವಿದ್ದರೂ ಯೆಹೋವನು ಅವೆಲ್ಲವುಗಳಿಂದ ಅವನನ್ನು ಬಿಡಿಸುತ್ತಾನೆ.
20. ಆತನು ಅವನ ಎಲುಬುಗಳನ್ನೆಲ್ಲಾ ಕಾಪಾಡುತ್ತಾನೆ; ಅವುಗಳಲ್ಲಿ ಒಂದಾದರೂ ಮುರಿದು ಹೋಗುವುದಿಲ್ಲ.
21. ದುಷ್ಟನ ಕೆಡುಕು ಅವನನ್ನೇ ಕೊಲ್ಲುವುದು, ನೀತಿವಂತನನ್ನು ದ್ವೇಷಿಸುವವರು ಅಪರಾಧಿಗಳೆಂದು ಎಣಿಸಲ್ಪಡುವರು.
22. ಯೆಹೋವನು ತನ್ನ ಸೇವಕರ ಪ್ರಾಣವನ್ನು ವಿಮೋಚಿಸುತ್ತಾನೆ; ಆತನ ಆಶ್ರಿತರಲ್ಲಿ ಒಬ್ಬರಾದರೂ ಅಪರಾಧಿಯೆಂದು ಎಣಿಸಲ್ಪಡುವುದಿಲ್ಲ.

# ನಿಮ್ಮ ಸಂಪೂರ್ಣ ಒಪ್ಪಿಸುವಿಕೆಯು ಹೇರಳವಾದ ಆಶೀರ್ವಾದಗಳಿಗೆ ನಡೆಸುತ್ತದೆ!

**YOUR COMPLETE SURRENDER WILL LEAD TO ABUNDANT BLESSINGS!**


*ಸಹೋದರಿ ಬಿಂಜಲ್*





ನಮ್ಮ ಕರ್ತನು ಮತ್ತು ರಕ್ಷಕನಾದ ಅಮೂಲ್ಯವಾದ ಯೇಸುವಿನ ನಾಮದಲ್ಲಿ ಶುಭಾಶಯಗಳು.

ನೀವು ಆಶೀರ್ವದಿಸಲ್ಪಟ್ಟ ಜನವರಿ ಮತ್ತು ವರ್ಷಕ್ಕೆ ಬಲವಾದ ಪ್ರಾರಂಭವನ್ನು ಹೊಂದಿದ್ದೀರಿ ಎಂದು ನಾನು ನಂಬಿ ಪ್ರಾರ್ಥಿಸುತ್ತೇನೆ. ಅನೇಕರಿಗೆ ಜನವರಿ ತಿಂಗಳು ಅನೇಕ ವಿಧವಾದ ಸವಾಲುಗಳ ತಿಂಗಳು ಆಗಿದೆ. ನನ್ನ ಪ್ರಾರ್ಥನೆಯು ಶಾಂತಿ, 2026 ರಲ್ಲಿ ನಿಮ್ಮ ಪಯಣದಲ್ಲಿ ದೇವರ ಕೃಪೆ ಮತ್ತು ಶಕ್ತಿಯು ನಿಮ್ಮನ್ನು ಉಳಿಸಿಕೊಂಡು ಮುಂದುವರಿಯಲಿ.



ಒಂದು ಒಳ್ಳೆಯ ಪ್ರಾರಂಭವು ಪ್ರಾಮುಖ್ಯವಾಗಿದೆ. ಆದರೆ ಅದನ್ನು ನಾವು ಹೇಗೆ ಮುಗಿಸುತ್ತೇವೋ ಅದು ಇನ್ನೂ ಹೆಚ್ಚು ಪ್ರಾಮುಖ್ಯವಾಗಿದೆ. ಕ್ರಿಸ್ತಯೇಸುವಿನಲ್ಲಿ

(3ನೇ ಪುಟಕ್ಕೆ)




**Echo of His Call**

**Christian YouTube Channel!**

Every day 2 minutes message by

**Pr. S. Sam Selva Raj!**

in English, Hindi, Tamil & Telugu

and

Tamil & English Message & Prayer

Sunday 8.30 A.M. & 6.00 P.M.

★ Please Subscribe and Share ★

# ECHO OF HIS CALL - (Marching towards 60th year)

Estd. 1969



## from your dearly beloved brother...



### OUR MISSION POLICY

We should expound and teach the contemporary generation the undiluted teachings of the ancient and early Apostles. It is the need of the hour.


**HON. EDITOR-IN-CHIEF**

Rev. Dr. Angeline S. Kumari, M.A., M.Sc., M.Ed.

**EX MANAGING EDITOR**

Pastor Alex Samson Sam, B.Th., M.Div.

**GENERAL MANAGER**

Bro. N. Prakasam, M.A, M.Sc(C&P), PGDHRM, MBA.

**ADMINISTRATION**

Sis. Jesy Veena Sam
Adv. K. Puratchivendan, M.Com., C.A., B.L.
Dr. P.E.R. Premchand, M.Sc, M.A., M.Ed, Ph.D.
Dr. C.G.S. Baburao, B.Tech, M.Tech (DM), Ph.D.
Dr. Rabinder Boaz, M.S. (CMC)

**EDITORIAL BOARD**

Dr. Serena Bevin, M.A., M.Phil., B.Ed.
Sis. Sajini Cherian
Rev. Dr. K.R. Rajasekaran
Rev. Dr. William Robert, Ph.D., DD, D.Lit.

**EDITOR, PUBLISHER & PRINTER**

Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 98412 71858 95661 31858

**E.MAIL**

sam@echoofhiscall.org
biblecor@yahoo.co.in

**WEBSITES**

www.echoofhiscall.org
www.stpaulsmatriculation.org

**YOUTUBE CHANNEL**

Echo of His Call


> ನೀವು ಎಲ್ಲರಿಗಿಂತಲು ಮೇಲಣವರಾಗಿರುವಿರೇ ಹೊರತು ಕೆಳಗಣವರಾಗಿರುವುದಿಲ್ಲ.
>
> - (ಧರ್ಮೋಪದೇಶಕಾಂಡ 28:13).

ಕರ್ತನಲ್ಲಿ ಪ್ರೀತಿಯುಳ್ಳವರೇ,

ನಮ್ಮ ಕರ್ತನು ರಕ್ಷಕನಾಗಿರುವ ಯೇಸುಕ್ರಿಸ್ತನ ಅಮೂಲ್ಯವಾದ ನಾಮದಲ್ಲಿ ನಾವು ನಿಮಗೆ ಶುಭಾಶಯಗಳು!

ಕಳೆದ ತಿಂಗಳಲ್ಲಿ ಎಲ್ಲಾ ಸೇವೆಗಳನ್ನು ಕರ್ತನು ತನ್ನ ಕೃಪೆಯಿಂದ ಆಶೀರ್ವದಿಸಿದ್ದಾನೆ. ನಾವು ಈ ತಿಂಗಳನ್ನು ಪ್ರವೇಶಿಸುವಾಗ, ನಮಗೆ ಹೊರಗಿನ ಮತ್ತು ಸ್ಥಳೀಯ ಸೇವೆಗಳು ಪರಿಪೂರ್ಣ ಗೊಳಿಸುವದಕ್ಕೆ ಕಾಯುತ್ತಾ ಇವೆ.



*Christmas function at St. Paul's Matriculation School*

ಸಂತ ಪೌಲ್ ಮೆಟ್ರಿಕ್ಯುಲೇಶನ್ ಶಾಲೆಯಲ್ಲಿ ನಡೆದ ಕ್ರಿಸ್ತಜಯಂತಿಯ ಕಾರ್ಯಕ್ರಮದಲ್ಲಿ ನಮ್ಮ ಕಾರ್ಯದರ್ಶಿಯಾದ ಡಾ.ಪಿ.ಇ.ಆರ್. ಪ್ರೇಮಚಂದರವರು ದೇವರ ವಾಕ್ಯವನ್ನು ಹಂಚಿಕೊಂಡರು. ಇದರ ಜೊತೆಗೆ, ನಮ್ಮ ನೆಹೆಮೀಯ ಸತ್ಯವೇದ ಕಾಲೇಜಿನ ವಿದ್ಯಾರ್ಥಿಗಳು ಮತ್ತು ನಮ್ಮ ಸಭೆಯ ವಿಶ್ವಾಸಿಗಳ ಕಡೆಯಿಂದ ಡಿಸೆಂಬರ್ ತಿಂಗಳಲ್ಲಿ ಅನೇಕ ಹೊರಗಿನ ಸೇವೆಗಳು ನಡೆದವು.

ಕಳೆದ ವರ್ಷದಲ್ಲಿ, ನಮ್ಮ ಯೂಟ್ಯೂಬ್ ಸೇವೆಯು ಗಮನಾರ್ಹವಾಗಿ ಬೆಳೆದಿರುವುದನ್ನು ನಾವು ಸಾಕ್ಷಿಕರಿಸಿದ್ದೇವೆ. ಈ ಸಂದೇಶಗಳ ಮೂಲಕ ಪ್ರಪಂಚದ ಅನೇಕ ಕಡೆಯಲ್ಲಿ ಅನೇಕ ಜನರು ಆಶೀರ್ವಾದವನ್ನು



*YouTube Ministry Team*

ಹೊಂದಿದ್ದಾರೆ. ಈ ಸೇವೆಯಲ್ಲಿ ನಿಷ್ಠೆಯಿಂದ ಒಳಗೊಂಡಿರುವ ನಮ್ಮ ಸಿಬ್ಬಂದಿ ಯವರಿಗಾಗಿ ನಿಮ್ಮ ಪ್ರಾರ್ಥನೆಗಳನ್ನು ನಾವು ದೀನತೆಯಿಂದ ಮನವಿ ಮಾಡಿಕೊಳ್ಳುತ್ತೇವೆ.

ನಾವು ನಮ್ಮ ಸಭೆಯಲ್ಲಿ ಹೆಚ್ಚುವರಿ ಹಿಂದಿ ಸೇವೆಯನ್ನು ಸಹ ಪ್ರಾರಂಭಿಸಿದ್ದೇವೆ. ವಿಶೇಷವಾಗಿ ಹಿಂದಿ ಮಾತನಾಡುವ ವಲಸೆ ಕಾರ್ಮಿಕರಿಗಾಗಿ. ಹಿಂದಿ ಪ್ರಾರ್ಥನೆ ಕೂಟವು ಪ್ರತಿ ಬುಧವಾರ ಸಾಯಂಕಾಲ 7 ಗಂಟೆಗೆ ನಡೆಸಲಾಗುವುದು. ಈ ಅರ್ಥಪೂರ್ಣ ಮತ್ತು ಹೆಚ್ಚು ನಿಮ್ಮ ಪ್ರಾರ್ಥನೆಗಳನ್ನು ನಾವು ಪ್ರಾಮಾಣಿಕವಾಗಿ ವಿನಂತಿಸುತ್ತೇವೆ. ಸೇವೆಯು ಅಗತ್ಯವಿದೆ. ನಿಮ್ಮ ಪ್ರಾರ್ಥನೆಗಳಲ್ಲಿ ನಮ್ಮ ಸೇವೆಗಳನ್ನು ಮತ್ತು ನಮ್ಮ ಕಛೇರಿಯ ಸಿಬ್ಬಂದಿವರ್ಗದವರನ್ನು ದಯಮಾಡಿ ಜ್ಞಾಪಕಮಾಡಿಕೊಳ್ಳಿರಿ. ವಿವಿಧ ಕಷ್ಟಗಳು ಮತ್ತು ಸವಾಲುಗಳ ನಡುವೆಯೂ ಅವರು ಶ್ರದ್ಧೆಯಿಂದ ಸೇವೆಯನ್ನು ಸಲ್ಲಿಸುತ್ತಾ ಇದ್ದಾರೆ. ನಮ್ಮ ಎಲ್ಲಾ ಸೇವೆಗಳು ನಿಮ್ಮ ಅಮೂಲ್ಯವಾದ ಪ್ರಾರ್ಥನೆ ಮತ್ತು ಉದಾರ ಸಹಕಾರದ ಮೂಲಕ ಪ್ರಗತಿಯನ್ನು ಸಾಧಿಸುತ್ತ ಇದ್ದೇವೆ. ದೇವರ ಕೃಪೆಯು ನಿಮ್ಮೆಲ್ಲರೊಂದಿಗೆ ಇರಲಿ. ಆಮೇನ್!

ಕ್ರಿಸ್ತುಯೇಸುವಿನಲ್ಲಿ ನಿಮ್ಮ ಸೇವಕ
ಪಾ. ಎಸ್. ಸ್ಯಾಮ್‌ಸೆಲ್ವರಾಜ್,
E.mail : sam@echoofhiscall.org

(1ನೇ ಪುಟದಿಂದ)

ಜಯಭರಿತ ಮತ್ತು ಫಲಭರಿತ ವರ್ಷವಾಗುವುದಕ್ಕೆ ನಾನು ಕರ್ತನಲ್ಲಿ ಪ್ರಾರ್ಥನೆ ಮಾಡುತ್ತೇನೆ. 2026 ವರ್ಷದ ಅಂತಿಮವು ಕೂಡ ಬಹಳ ಮಹಿಮೆಯುಳ್ಳದ್ದಾಗಿರಲಿ. ಅದರ ಪ್ರಾರಂಭಕ್ಕಿಂತ ಆಶೀರ್ವಾದ.

## ಚೆನ್ನಾಗಿ ಪ್ರಾರಂಭಿಸಿದ ಆದರೆ ಚೆನ್ನಾಗಿ ಮುಗಿಸದ ರಾಜ!

ಈ ಸತ್ಯವು ತನ್ನ ಪ್ರಯಾಣವನ್ನು ಬಲವಾಗಿ ಪ್ರಾರಂಭಿಸಿದ ಅರಸನಾದ ಅಮಚ್ಯನನ್ನು ನೆನಪಿಸುತ್ತದೆ. ಆದರೆ ಅವನ ಅಂತ್ಯವು ದುರಂತವಾಗಿತ್ತು. ದೇವರ ವಾಕ್ಯವು ನಮಗೆ ಅದರ ಕಾರಣವನ್ನು ಸ್ಪಷ್ಟವಾಗಿ ಪ್ರಕಟಿಸುತ್ತದೆ.

ಅವನು ಯೆಹೋವನ ಚಿತ್ತಾನುಸಾರವಾಗಿ ನಡೆದನು. ಆದರೆ ಯಥಾರ್ಥಚಿತ್ತನಾಗಿರಲಿಲ್ಲ (2 ಪೂರ್ವ ಕಾಲ 25:2).

## ಅಮಚ್ಯನು ಯಾರು?

- ಅಮಚ್ಯನು ಅರಸನಾದ ಯೆಹೋವಾಷನ ಮಗನು. ಇವನು 7 ವರ್ಷದಲ್ಲಿ ಅರಸನಾಗಿದ್ದನು.
- ಇವನು ಯೂದದ 9ನೇ ಅರಸನಾಗಿದ್ದನು.



- ಆತನ ಕಥೆಯು 2 ಅರಸುಗಳು ಮತ್ತು 2 ಪೂರ್ವಕಾಲ ವೃತ್ತಾಂತ 25ರಲ್ಲಿ ದಾಖಲೆಯಾಗಿದೆ.

ಸತ್ಯವೇದವು ನಮಗೆ ಗಮನಾರ್ಹವಾದ ವಿಷಯವನ್ನು ತಿಳಿಸುತ್ತದೆ. ಆದಾಗ್ಯೂ ಆಳವಾದ ಕಾಳಜಿ ಇದೆ.

ಅವನು ಯೆಹೋವನ ಚಿತ್ತಾನುಸಾರವಾಗಿ ನಡೆದನು? ಆದರೆ ಯಾಥಾರ್ಥ ಹೃದಯದಿಂದ ಅಲ್ಲ.

- ನಿಷ್ಠಾವಂತ ಹೃದಯವಿಲ್ಲದೆ ದೇವರನ್ನು ಸೇವಿಸುವುದರ ಅರ್ಥವೇನು?
- ದೇವರ ಮುಂದೆ ಸರಿಯಾದದ್ದನ್ನು ಮಾಡಲು ಸಾಧ್ಯವೇ ಮತ್ತು ಇನ್ನೂ ಸಂಪೂರ್ಣವಾಗಿ ಒಪ್ಪಿಸಿಕೊಟ್ಟಿಲ್ಲ.
- ನಮ್ಮ ಹೃದಯಗಳು ವಿಭಜಿಸಲ್ಪಟ್ಟಿರುವಾಗ ನಾವು ದೇವರನ್ನು ಬಾಹ್ಯವಾಗಿ ಸೇವಿಸಬಹುದೇ?

ಅಮಚ್ಯನು ಅತ್ಯಂತ ದುರಂತ ಅರಸರಲ್ಲಿ ಒಬ್ಬನು ಎಂದು ಸತ್ಯವೇದವು ಹೇಳುತ್ತದೆ. ಆತನು ಕೆಟ್ಟವನು ಆಗಿರುವುದರಿಂದ ಅಲ್ಲ. ಆದರೆ ಆತನು ಬಹುತೇಕ ಒಳ್ಳೆಯವನಾಗಿದ್ದನು. ಭಾಗಶಃ ವಿಧೇಯತೆ ಮತ್ತು ಅರ್ಧ ಹೃದಯ.

- ಆತನು ವಿಧೇಯನಾದನು
- ಆತನು ಒಳ್ಳೆಯದನ್ನು ಮಾಡಿದನು
- ಆತನು ದೇವರ ಆಜ್ಞೆಗಳನ್ನು ಅನುಸರಿಸಿದನು.

ಆದಾಗ್ಯೂ ಆತನ ಹೃದಯವು ಸಂಪೂರ್ಣವಾಗಿ ಒಪ್ಪಿಸಿಕೊಟ್ಟಿರಲಿಲ್ಲ.

ಇದು ಕೇವಲ ಅಮಚ್ಯನ ಕಥೆಯಲ್ಲ, ಈ ಹೊತ್ತು ಅನೇಕ ವಿಶ್ವಾಸಿಗಳ ಕಥೆಯಾಗಿದೆ. ನಾವು ದೇವರನ್ನು ಪ್ರೀತಿಸುತ್ತೇವೆ. ಆತನನ್ನು ಹಿಂಬಾಲಿಸುತ್ತೇವೆ.ಇನ್ನೂ ನಮ್ಮ ಜೀವನದ ಕ್ಷೇತ್ರಗಳು ಇರಬಹುದು. ನಾವು ಆತನಿಗೆ ಮಿತಿಯನ್ನು ಇರಿಸಿದ್ದೇವೆ.

ನಾವು :

- ಸಭೆಗೆ ಹಾಜರಿ
- ನಂಬಿಕೆಯಿಂದ ಸೇವೆ
- ದಾನವನ್ನು ಮಾಡುವುದು
- ಅಗತ್ಯವಿದ್ದವರಿಗೆ ಸಹಾಯ ಮಾಡುವುದು
- ಅನೇಕ ಪ್ರದೇಶಗಳಲ್ಲಿ ಆತನಿಗೆ ವಿಧೇಯರಾಗಿರುವುದು.

ಆದರೆ ನಿರ್ಣಾಯಕ ಪ್ರಶ್ನೆಯು ಹಾಗೆ ಉಳಿಯುತ್ತದೆ.

ದೇವರ ಮುಂದೆ ನಮ್ಮ ಹೃದಯವು ಎಲ್ಲಿದೆ?

## VERY URGENT NOTICE!




There may be unavoidable disruptions in the postal dispatch of **Echo of His Call** in the near future. If you wish to continue receiving **Echo of His Call** without interruption, please send us your name, address, email, and WhatsApp number via letter, email, phone call, or SMS/WhatsApp message immediately.

Your support helps us serve you better!

**Our address:**

**ECHO OF HIS CALL,**
**10, Mohammed Abdullah 2nd Street, Chepauk, Chennai-600 005, India**
**Cell: (+91) 98412 71858 / 98410 71858 E.mail: sam@echoofhiscall.org**

ನನ್ನ ತಂದೆಯು ಯಾವಾಗಲೂ ಹೇಳುತ್ತಾ ಇರುತ್ತಾರೆ. ಭಾಗಶಃ ವಿಧೇಯತೆಯು ಸಂಪೂರ್ಣ ಅವಿಧೇಯತೆ. ಈ ವರ್ಷದ ಪ್ರಾರಂಭದಲ್ಲಿ, 2026 ಚೆನ್ನಾಗಿ ಮುಗಿಸಬೇಕೆಂದರೆ ನಾವು ಒಂದು ಪ್ರಶ್ನೆಯನ್ನು ಕೇಳಿಕೊಳ್ಳಲೇಬೇಕು.

ನಿಷ್ಠಾವಂತ ಹೃದಯದಿಂದ ಅಥವಾ ಇಲ್ಲದೆ ನಾನು ಸರಿಯಾದದ್ದನ್ನು ಮಾಡುತ್ತಿದ್ದೇನೆಯೋ?

## ಅಮ್ಮಚನ ಜೀವನದಿಂದ ಪಾಠಗಳು

ಯೂದದ ಮತ್ತು ಇಸ್ರಾಯೇಲ್ಯ ಅರಸುಗಳ ಜೀವನವನ್ನು ನಾನು ಧ್ಯಾನ ಮಾಡುವದಕ್ಕೆ







*Amaziah began well but, he did not finish well*


ಪ್ರೀತಿಸುತ್ತೇನೆ. ಅವರ ಕಥೆಗಳು ಶಕ್ತಿಯುಳ್ಳ ಪಾಠಗಳನ್ನು ನಮಗೆ ಕೊಡುತ್ತವೆ. ನಮ್ಮ ಜೀವಿತಕ್ಕೆ ಕನ್ನಡಿಗಳು ಆಗಿವೆ. ಅಮ್ಮಚನು ಚೆನ್ನಾಗಿ ಪ್ರಾರಂಭಿಸಿದನು. ಆದರೂ ಏನೋ ತಪ್ಪಾಗಿದೆ. ಅದು ಗಂಭೀರವಾದ ಪರಿಣಾಮಗಳಿಗೆ ನಡೆಸಿತು.

## 1. ಸಮರ್ಪಣೆ!

### ಅಮ್ಮಚನು ಚೆನ್ನಾಗಿ ಪ್ರಾರಂಭಿಸಿದನು!

(2 ಪೂರ್ವಕಾಲ ವೃತ್ತಾಂತ 25:1-10)

ಇವನು ತನ್ನ ತಂದೆಯಾದ ಯೆಹೋವಾಶನ ಮಾರ್ಗದಲ್ಲಿ ತಪ್ಪದೆ ನಡೆದು ಯೆಹೋವನ ದೃಷ್ಟಿಯಲ್ಲಿ ಒಳ್ಳೆಯವನಾದನು; ಆದರೂ ತನ್ನ ಪೂರ್ವಿಕನಾದ ದಾವೀದನಷ್ಟು ಉತ್ತಮನಾಗಿರಲಿಲ್ಲ. 2 ಅರಸುಗಳು 14:3



*Amaziah followed the example of his father Joash, but not as King David*

ಅಮ್ಮಚನು ಬಲವಾದ ಪ್ರಾರಂಭವನ್ನು ಹೊಂದಿದ್ದನು ಮತ್ತು ಅನೇಕ ಪ್ರದೇಶಗಳಲ್ಲಿ ವಿಧೇಯತೆಯನ್ನು ಪ್ರದರ್ಶಿಸಿದನು.

### ಅ) ದೇವರ ವಾಕ್ಯಕ್ಕೆ ವಿಧೇಯತೆ ಮತ್ತು ನ್ಯಾಯ!

ಅಮ್ಮಚನು ಸಿಂಹಾಸನಕ್ಕೆ ಬಂದಾಗ, ಅವನು ತನ್ನ ತಂದೆಯನ್ನು ಕೊಂದವರ ಮೇಲೆ ನ್ಯಾಯವನ್ನು ಜಾರಿಗೊಳಿಸಿದನು. ಏನೇ ಹಾಗಲಿ, ಅವನು ಅವರ ಮಕ್ಕಳನ್ನು ಸಾಯಿಸಲಿಲ್ಲ, ದೇವರ ಧರ್ಮಶಾಸ್ತ್ರಕ್ಕೆ ವಿಧೇಯನಾಗಿ :

ಮಕ್ಕಳ ಪಾಪದ ದೆಸೆಯಿಂದ ತಂದೆಗೂ ತಂದೆಯ ಪಾಪದ ದೆಸೆಯಿಂದ ಮಕ್ಕಳಿಗೂ ಮರಣ ಶಿಕ್ಷೆಯಾಗಬಾರದು. (ಧರ್ಮೋಪದೇಶ 24:16).

ಇದು ಧೈರ್ಯ ಬೇಕಾಗಿದೆ. ಆತನು ಪ್ರತಿಕಾರವನ್ನು ಮಾಡಬಹುದಾಗಿತ್ತು, ಆದರೆ ಅವನು ವಿಧೇಯತೆಯನ್ನು ಆರಿಸಿಕೊಂಡನು (2 ಅರಸುಗಳು 14:6). ಅತಲ್ಯ ರಾಣಿಯ ಹಾಗೆ (2 ಅರಸುಗಳು 11:1). ಆಕೆಯು ರಾಜಸಂತಾನದವರನ್ನೆಲ್ಲಾ ಸಂಹರಿಸಿಬಿಟ್ಟಳು.

ಅಮ್ಮಚನು ದೇವರ ಧರ್ಮಶಾಸ್ತ್ರವನ್ನು ಗೌರವಿಸಿದನು. ಅವನು ಚೆನ್ನಾಗಿ ಪ್ರಾರಂಭಿಸಿದನು.

### ಬ) ವೈಯುಕ್ತಿಕ ನಷ್ಟದ ಹೊರತಾಗಿಯೂ ವಿಧೇಯತೆ!

ಅಮ್ಮಚನು ಇಸ್ರಾಯೇಲ್ಯರಿಂದ 100,000 ಸೈನಿಕರನ್ನು ಬಾಡಿಗೆ ತೆಗೆದುಕೊಂಡನು. ಇದು ದುಬಾರಿಯಾದ ಹೂಡಿಕೆ. ಪ್ರವಾದಿಯು ಅವನಿಗೆ ಅವರುಗಳನ್ನು ಉಪಯೋಗಿಸಬಾರದೆಂದು ಸಲಹೆ ಕೊಟ್ಟಾಗ. ಅಮ್ಮಚನು ಪ್ರಾಮಾಣಿಕ




*But what about the hundred talents I paid?*

ಪ್ರಶ್ನೆಯನ್ನು ಕೇಳಿದನು. ಆದರೆ ನೂರು ತಲಾಂತುಗಳನ್ನು ಕೊಟ್ಟ ವಿಷಯದಲ್ಲಿ ಮಾಡುವುದೇನು? 2 ಪೂರ್ವಕಾಲ 25: 9.

ಪ್ರವಾದಿ ಉತ್ತರಿಸಿದನು, ಯೆಹೋವನು ಅದಕ್ಕಿಂತ ಎಷ್ಟೋ ಹೆಚ್ಚಾಗಿ ನಿನಗೆ ಕೊಡಬಲ್ಲನು. 2 ಪೂರ್ವಕಾಲ 25:9. ವಿಧೇಯತೆಯು ಅವನಿಗೆ ಬಹಳವಾಗಿ ಖರ್ಚಾದರೂ, ಅಮ್ಮಚನು ಆಲಿಸಿದನು. ಅವನು ಸೈನಿಕರನ್ನು ಮನೆಗೆ ಕಳುಹಿಸಿ ಮತ್ತು ದೇವರನ್ನು ನಂಬಿದನು.

ವಿಧೇಯತೆಯು ಯಾವಾಗಲೂ ಖರ್ಚಾಗುತ್ತದೆ ಆದರೆ ಅವಿಧೇಯತೆಯು ಇನ್ನೂ ಖರ್ಚು ಹೆಚ್ಚಾಗುತ್ತದೆ. ಈ ಒಂದು ಅಂಶದಲ್ಲಿ, ಅಮ್ಮಚನು ದೈವತ್ವದ ಅರಸನಾಗಿ ಕಾಣಿಸುತ್ತಾನೆ. ದೇವರು ಅವನನ್ನು ಗೌರವಿಸಿದನು.



*Amaziah sent the soldiers home*

ಅಮ್ಮಚನು ಸೈನಿಕರನ್ನು ಮನೆಗೆ ಕಳುಹಿಸಿದನು

(ಇನ್ನೇ ಪುಟಕ್ಕೆ...)

GREAT COMMISSION PARTNERS

ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು



ಹಂಚುವುದು (ಗಲಾತ್ಯ. 6:2), ಪ್ರೋತ್ಸಾಹಿಸುವುದು (ರೋಮಾಪುರ. 12:13)
ತ್ವರಿತಗೊಳಿಸುವುದು (II ತಿಮೋಥಿ. 1:6)
ಸ್ತುತಿ ಮತ್ತು ಪ್ರಾರ್ಥನಾ ಮನವಿಗಳು
19 ಫೆಬ್ರವರಿ 2026 ರಿಂದ 18 ಮಾರ್ಚ್ 2026 ರ ವರೆಗೆ
(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)

## ಈ ವಿಷಯಗಳಿಗಾಗಿ ದೇವರಿಗೆ ಸ್ತೋತ್ರವನ್ನು ಸಲ್ಲಿಸಿರಿ.

ಫೆಬ್ರವರಿ 19 : ಆತನ ಕರೆಯ ಸೇವೆಯ ಯೂಟ್ಯೂಬ್ ಚಾನೆಲ್ ತಡೆರಹಿತ ಪ್ರಸಾರದಲ್ಲಿ ನಮಗೆ ಸಹಾಯ ಮಾಡುವ ಅದ್ಭುತ ಮಾಧ್ಯಮ ತಂಡ.

ಫೆಬ್ರವರಿ 20 : ನೈತಿಕ ಮತ್ತು ಹಣಕಾಸಿನ ಸಹಾಯ ನಮ್ಮ ಬೆಂಬಲಿಗರಿಂದ ಆಶೀರ್ವದಿಸಿದ್ದಾನೆ.

ಫೆಬ್ರವರಿ 21 : 2026 ವರ್ಷದ ತಿಂಗಳ ಕಾಲೆಂಡರ್ ಮತ್ತು ವಾಗ್ದಾನ ಕಾರ್ಡ್‌ಗಳ ಮುದ್ರಣ ಮತ್ತು ಕಳುಹಿಸುವ ಕೆಲಸವನ್ನು ಪೂರ್ಣಗೊಳಿಸುವಂತೆ ದೇವರ ಕೃಪೆ ಕೊಟ್ಟಿದ್ದಕ್ಕಾಗಿ.

ಫೆಬ್ರವರಿ 22 : ನೆಹೆಮೀಯ ಸತ್ಯವೇದ ಕಾಲೇಜುಗಳಲ್ಲಿ ಮತ್ತು ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆಯಲ್ಲಿ ವಿಶೇಷ ಕ್ರಿಸ್ಮಸಯಂತಿ ಮತ್ತು ಹೊಸವರ್ಷದ ಕಾರ್ಯಕ್ರಮಗಳ ಮೇಲೆ ಆತನ ಆಶೀರ್ವಾದಕ್ಕಾಗಿ.

ಫೆಬ್ರವರಿ 23 : ನಮ್ಮ ಸಭೆಯ ಎಲ್ಲಾ ಚಟುವಟಿಕೆಗಳಲ್ಲಿ ಯೌವ್ವನಸ್ಥರ ಸಕ್ರಿಯ ಭಾಗವಹಿಸುವ ಆಶೀರ್ವಾದಕ್ಕಾಗಿ.

ಫೆಬ್ರವರಿ 24 : ನಮ್ಮ ಸಮೂಹ ಮಾಧ್ಯಮದ ಸೇವೆ ಮತ್ತು ಆತನ ಕರೆಯ ಪ್ರತಿಧ್ವನಿಯ ಯೂಟ್ಯೂಬ್ ಚಾನೆಲ್ ಸೇವೆಯು ತಲುಪದೇ ಇರುವ ಸ್ಥಳಗಳಿಗೆ ಅನೇಕ ಭಾಷೆಗಳಲ್ಲಿ ತಲುಪುವಂತೆ ಆಶೀರ್ವದಿಸಿದಕ್ಕಾಗಿ.

ಫೆಬ್ರವರಿ 25 : ನಮ್ಮ ಪ್ರಾರ್ಥನಾ ಸಹಭಾಗಿಗಳು, ಚಂದಾ ಸಹಭಾಗಿಗಳು, ನಂಬಿಕೆಯ ಸಹಭಾಗಿಗಳು, ಜೀವಂತ ಸಹಭಾಗಿಗಳು ಮತ್ತು ದೊಡ್ಡ ಆಜ್ಞೆಯ ಸಹಭಾಗಿಗಳು ಮತ್ತು ಅವರ ಕುಟುಂಬಗಳ ಮೇಲೆ ಆತನ ಕರುಣೆಗಾಗಿ.

ಫೆಬ್ರವರಿ 26 : ನಮ್ಮ ಸಭೆಯ ಸೇವೆಯು ಹೆಚ್ಚು ಸಂಘಟಿತ ರೀತಿಯಲ್ಲಿ ಕೆಲಸ ಮಾಡಲು ಆಶೀರ್ವದಿಸಿದ್ದಾನೆ.

ಫೆಬ್ರವರಿ 27 : ನಮ್ಮ ಹಿರಿಯ ಸಭಾ ಪಾಲಕರಾದ ಎಸ್ ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬವನ್ನು ಎಲ್ಲಾ ದುಷ್ಟಶಕ್ತಿಯಿಂದ ರಕ್ಷಿಸಿದಕ್ಕಾಗಿ.

ಫೆಬ್ರವರಿ 28 : ಆತನ ಕರೆಯ ಪ್ರತಿಧ್ವನಿಯ ಸೇವೆಯ ಎಲ್ಲಾ ಸಿಬ್ಬಂದಿ ವರ್ಗ ಮತ್ತು ಅವರ ಕುಟುಂಬಗಳ ಆರೋಗ್ಯಕ್ಕಾಗಿ ಮತ್ತು ದೈವತ್ವದ ಸಂರಕ್ಷಣೆಯ ಆಶೀರ್ವಾದಕ್ಕಾಗಿ.

ಮಾರ್ಚ್ 01 : ನಮ್ಮ ಸತ್ಯವೇದ ಅಂಚೆ ತರಗತಿಗಳು ಮತ್ತು ದೈವಶಾಸ್ತ್ರದ ಕೋರ್ಸ್‌ಗಳ ಅಭಿವೃದ್ಧಿಯ ಮೇಲೆ ಆತನ ಆಶೀರ್ವಾದ.

ಮಾರ್ಚ್ 02 : ನಮ್ಮ ಮುಖ್ಯ ಸಭೆ ಮತ್ತು ಶಾಖ ಸಭೆಗಳ ಭಾನುವಾರ ಆರಾಧನೆಗಳಲ್ಲಿ ದೇವರ ಶಕ್ತಿಯು ಪ್ರಕಟವಾಗಿದ್ದಕ್ಕಾಗಿ.

ಮಾರ್ಚ್ 03 : 16 ಭಾಷೆಗಳಲ್ಲಿ ನಮ್ಮ ಪತ್ರಿಕೆಯನ್ನು ನಮ್ಮ ಮುದ್ರಣಾಲಯದಲ್ಲಿ ಮುದ್ರಿಸಿ ಮತ್ತು ಪ್ರಕಟಿಸಿ ಅವುಗಳನ್ನು ಸೇವಾಕ್ಷೇತ್ರಗಳಿಗೆ ಕಳುಹಿಸುವಂತೆ ಶಕ್ತಗೊಳಿಸಿದ್ದಕ್ಕಾಗಿ.

ಮಾರ್ಚ್ 04 : ನಮ್ಮ ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು ಮತ್ತು ಬೇರೆ ಸಿಬ್ಬಂದಿ ವರ್ಗದವರ ಮೇಲೆ ಆಶೀರ್ವಾದಕ್ಕಾಗಿ.

## ದಯಮಾಡಿ ಈ ವಿಷಯಗಳಿಗಾಗಿ ಪ್ರಾರ್ಥಿಸಿರಿ.

ಮಾರ್ಚ್ 05 : ಕ್ರೈಸ್ತಿಯ ಭೋಧಕರು ದೇವರ ವಾಕ್ಯವನ್ನು ಕಲಬೆರಕೆ ಮಾಡದಂತೆ ಸಂಪೂರ್ಣವಾಗಿ ಬೋಧಿಸುವಂತೆ.

ಮಾರ್ಚ್ 06 : 2026-27ನೇ ಶೈಕ್ಷಣಿಕ ವರ್ಷಕ್ಕೆ ನಮ್ಮ ವಸತಿ ಮತ್ತು ಸಾಯಂಕಾಲ್ ನೆಹೆಮೀಯ ಸತ್ಯವೇದ ಕಾಲೇಜುಗಳಿಗೆ ಅರ್ಹ ಅಭ್ಯರ್ಥಿಗಳ ಪ್ರವೇಶಕ್ಕಾಗಿ.

ಮಾರ್ಚ್ 07 : 2026-27 ಶೈಕ್ಷಣಿಕ ವರ್ಷಕ್ಕೆ ನಮ್ಮ ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆಗೆ ಹೊಸ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ.

ಮಾರ್ಚ್ 08 : ಈ ಜಗತ್ತಿನ ಎಲ್ಲಾ ಮಕ್ಕಳು ಮತ್ತು ಯೌವ್ವನಸ್ಥರು ಕ್ರಿಸ್ತಯೇಸುವನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸುವಂತೆ.

ಮಾರ್ಚ್ 09 : ನಮ್ಮ ಸಹಸಂಪಾದಕರು ಮತ್ತು ಅವರ ಕುಟುಂಬಗಳಿಗಾಗಿ.

ಮಾರ್ಚ್ 10 : ವೃದ್ಧಾಶ್ರಮದಲ್ಲಿರುವ ವೃದ್ಧರ ಆರೋಗ್ಯ ಮತ್ತು ಶಾಂತಿಗಾಗಿ.

ಮಾರ್ಚ್ 11 : ನಮ್ಮ ಸಂತಪೌಲ್ ಮೆಟ್ರಿಕ್ಯುಲೇಷನ್ ಶಾಲೆಯ 10ನೇ ತರಗತಿಯ ವಿದ್ಯಾರ್ಥಿಗಳು ಅಂತಿಮ ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶವನ್ನು ಸಾಧಿಸುವಂತೆ.

ಮಾರ್ಚ್ 12 : ನಮ್ಮ ಆತನ ಕರೆಯ ಪ್ರತಿಧ್ವನಿಯ ಯೂಟ್ಯೂಬ್ ಶಾರ್ಟ್‌ಗಳು ತಲುಪದೇ ಇರುವ ಸ್ಥಳಗಳಿಗೆ ತಲುಪುವಂತೆ.

ಮಾರ್ಚ್ 13 : ನೆಹೆಮೀಯ ಸತ್ಯವೇದ ಕಾಲೇಜಿನ ವಿದ್ಯಾರ್ಥಿಗಳು ಪದವಿಯನ್ನು ಸಫಲವನ್ನು ಮುಗಿಸುವಂತೆ.

ಮಾರ್ಚ್ 14 : ನಮ್ಮ ಪ್ರಾರ್ಥನಾ ಸಹಭಾಗಿಗಳು, ಚಂದಾ ಸಹಭಾಗಿಗಳು, ನಂಬಿಕೆಯ ಸಹಭಾಗಿಗಳು, ಜೀವಂತ ಸಹಭಾಗಿಗಳು ಮತ್ತು ದೊಡ್ಡ ಆಜ್ಞೆಯ ಸಹಭಾಗಿಗಳು ಮತ್ತು ಅವರ ಕುಟುಂಬಗಳು ಪ್ರಗತಿಯನ್ನು ಸಾಧಿಸುವಂತೆ.

ಮಾರ್ಚ್ 15 : ಪ್ರಪಂಚದ ಎಲ್ಲಾ ದೇಶಗಳಲ್ಲಿ ಯುದ್ಧದಿಂದ ದೈವತ್ವದಿಂದ ಸಂರಕ್ಷಣೆಯಾಗುವಂತೆ.

ಮಾರ್ಚ್ 16 : ಪ್ರಪಂಚದಾದ್ಯಂತ ಮಿಷನರಿ ಸೇವಕರ ದೈವಿಕ ರಕ್ಷಣೆ.

ಮಾರ್ಚ್ 17 : ಎಲ್ಲಾ ದೇಶಗಳ ಮೇಲೆ ಆತನ ಆಶೀರ್ವಾದ ಮತ್ತು ಆರ್ಥಿಕ ಬೆಳವಣಿಗೆಗಾಗಿ.

ಮಾರ್ಚ್ 18 : ನಮ್ಮ ಹಿರಿಯ ಸಭಾ ಪಾಲಕರಾದ ಪಾ.ಎಸ್. ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬವನ್ನು ದುಷ್ಟಶಕ್ತಿಯಿಂದ ಸಂರಕ್ಷಿಸುವಂತೆ.

(4ನೇ ಪುಟದಿಂದ)

ಆದಾಗ್ಯೂ, ದೇವರ ವಾಕ್ಯವು ನಮ್ಮನ್ನು ಎಚ್ಚರಿಸುತ್ತದೆ :

ಆತನು ಸರಿಯಾಗಿ ಮಾಡಿದನು?ಆದರೆ ಯಾಥಾರ್ಥ ಹೃದಯದಿಂದ ಅಲ್ಲ.

## ಬಿ) ಸಂಪೂರ್ಣ ಒಪ್ಪಿಸುವಿಕೆ ಇಲ್ಲದ ಸಮರ್ಪಣೆ!

ಅಮ್ಮಚನು ಕೆಟ್ಟ ಅಥವಾ ಬಂಡಾಯಗಾರ ಅಲ್ಲ. ಅವನು ತನ್ನ ದೈವತ್ವದ ತಂದೆಯಾದ



'Shalem' means fully surrendered

ಯೆಹೋವನನ್ನು ಅನುಸರಿಸಿದನು. ದಾವೀದನ ಹಾಗೆ, ಪೂರ್ಣ ಹೃದಯದಿಂದ ದೇವರ ಸೇವೆಯನ್ನು ಮಾಡಿದನು.

ಅವನು ಚೆನ್ನಾಗಿ ಪ್ರಾರಂಭಿಸಿದನು. ಆದರೆ ದೇವರು ಚೆನ್ನಾಗಿ ಪ್ರಾರಂಭಿಸುವವರನ್ನು ನೋಡುವುದಿಲ್ಲ, ಆದರೆ ಚೆನ್ನಾಗಿ ಮುಗಿಸುವವರನ್ನು. ಅಮ್ಮಚನು ಸರಿಯಾಗಿ ಮಾಡಿದನು ಆದರೆ ಯಾಥಾರ್ಥ ಹೃದಯದಿಂದ ಅಲ್ಲ. ಇಬ್ರಿಯ ಶಬ್ದ ಸೆಲ್ಮ್ ಅರ್ಥ ಸಂಪೂರ್ಣ, ಪರಿಪೂರ್ಣ, ವಿಚ್ಛೇದನವಾಗದ, ಸಂಪೂರ್ಣ ಸಮರ್ಪಣೆ.


ಅಮ್ಮಚನ ಸಮಸ್ಯೆಯು ಭಾಗಶಃ ವಿಧೇಯತೆ. ಅವನು ದೇವರನ್ನು ಹೊರಗಿನಿಂದ ಹಿಂಬಾಲಿಸಿದನು. ಆದರೆ ಅವನು ಹೃದಯದ ಪ್ರದೇಶಗಳನ್ನು ಅಸ್ಪೃಶ್ಯವಾಗಿ ಇರಿಸಿದನು.

ಪ್ರೀತಿಯ ಸಹೋದರ ಮತ್ತು ಸಹೋದರಿಯರೇ, ಇದು ಸಾಧ್ಯವಾಗಬಹುದು :

- ದಶಮಾಂಶಗಳನ್ನು ಕೊಡುವುದು
- ನಂಬಿಗಸ್ತಿಕೆಯಿಂದ ಸೇವೆ ಸಲ್ಲಿಸುವುದು
- ನೈತಿಕವಾಗಿ ಇರುವುದು

ಆದಾಗ್ಯೂ ಇನ್ನೂ ಗರ್ವ, ಕ್ಷಮಿಸದಿರುವಿಕೆ, ಕಾಮ, ಗೊಡ್ಡುಕರಟೆ, ಗುಪ್ತ ಪಾಪಗಳು ಅಥವಾ ಸ್ವಂತ ನಿಯಮಕ್ಕೆ ಅಂಟಿಕೊಳ್ಳುವುದು.

ಆಂತರಿಕ ವಿಧೇಯತೆ ಇಲ್ಲದೆ ಬಾಹ್ಯ ವಿಧೇಯತೆಯು ಆಧ್ಯಾತ್ಮಿಕ ಶೂನ್ಯತೆಗೆ ಕಾರಣವಾಗುತ್ತದೆ. ಒಬ್ಬನು ಆಳವಾಗಿ ಬೇರೂರಿ ಮತ್ತು ಮೇಲಕ್ಕೆ ಫಲವನ್ನು ನೀಡಬೇಕು.



One should be deeply rooted and bear fruit upwards

## 2. ರಾಜಿ ಮಾಡಿಕೊಳ್ಳುವುದು!

ಅವನು ಅನುಮತಿಸಿದ್ದು ಅಂತಿಮವಾಗಿ ಅವನನ್ನು ನಾಶ ಮಾಡಿತು!

(2 ಪೂರ್ವಕಾಲ ವೃತ್ತಾಂತ 25:11-16)

ಪೂಜಾ ಸ್ಥಳಗಳನ್ನು ಇನ್ನೂ ತೆಗೆಯಲ್ಪಡಲಿಲ್ಲ, 2 ಅರಸು 14:4

ಅಮ್ಮಚನು ನಾಶವಾಗಬೇಕಾಗಿರುವವನ್ನು ಅವನು ಸಹಿಸಿಕೊಂಡನು.

ರಾಜಿ ಮಾಡಿಕೊಳ್ಳುವುದು ಯಾವಾಗಲೂ ಚಿಕ್ಕದಿಂದ ಪ್ರಾರಂಭವಾಗುತ್ತದೆ. ಆದರೆ ಈ ಹೊತ್ತು ನಾವು ಏನನ್ನು ಸಹಿಸಿಕೊಳ್ಳುತ್ತೇವೆ ಅದು ನಾಳೆ ನಮ್ಮ ಮೇಲೆ ಪ್ರಾಬಲ್ಯವನ್ನು ಸಾಧಿಸುತ್ತದೆ.

## ಅ) ವಿಜಯದ ನಂತರ ಗರ್ವ!



Amaziah brought back their idols and worshipped them

ಅಮಚ್ಯನು ಎದೋಮ್ಯರನ್ನು ಸೋಲಿಸಿ ಮನೆಗೆ ಬಂದ ಮೇಲೆ ತಾನು ತೆಗೆದುಕೊಂಡು ಬಂದಿದ್ದ ಸೇಯರಾರಿನವರ ದೇವತಾ ಪ್ರತಿಮೆಗಳನ್ನು ತನ್ನ ದೇವರುಗಳೆಂದು ನಿಲ್ಲಿಸಿ ಅವುಗಳಿಗೆ ಅಡ್ಡಬಿದ್ದು ಧೂಪ ಹಾಕುತ್ತಿದ್ದನು (2 ಪೂರ್ವಕಾಲ 25:14).

ಇದರ ಬಗ್ಗೆ ಆಲೋಚಿಸಿರಿ :

ದೇವರು ಅವನಿಗೆ ಜಯವನ್ನು ಕೊಟ್ಟನು.

- ಗರ್ವವು ಪ್ರವೇಶಿಸಿತು
- ವಿವೇಚನೆಯು ಹೋಯಿತು
- ರಾಜಿ ಮಾಡಿಕೊಳ್ಳುವುದನ್ನು ಅನುಸರಿಸುವುದು.

ಅವನು ಸೋತ ಜನರ ದೇವರುಗಳಿಗೆ ನಮಸ್ಕರಿಸಿದನು. ಈ ರೀತಿಯಾಗಿ ಪಾಪವು ಮೋಸಗೊಳಿಸಬಲ್ಲದು.

(8ನೇ ಪುಟಕ್ಕೆ)

NEHEMIAH BIBLE COLLEGES,
Chepauk & Santhoshapuram, Velachery Chennai.
Qualification : 10th Standard & above
Rush for admission! Medium :Tamil (Part Time)
Diploma in Theology & Bachelor of Theology
Hindi (Residential) (Sponsorship Available)
ECHO OF HIS CALL
Recognised by International Christian Leaders & Senior Pastors for the past 56 years
Contact : The Chairman, Nehemiah Bible College.
10, MOHAMMED ABDULLAH 2ND STREET, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org

## MAIN CHURCH PROGRAMMES

1. Prayer Service : 24 hours
2. **ECHO OF HIS CALL** - Monthly Magazines :English, Tamil, Malayalam, Telugu, Hindi, Kannada, Marathi, Gujarati, Bengali, Odiya, Nepali, Assamese, Punjabi, Urdu, Sinhala & Afrikaans.
3. **BIBLECOR -** Basic Bible Courses (English, Tamil & Hindi)
4. Theological Correspondence Courses: English & Tamil
5. Nehemiah Bible Colleges (Chepauk, Santhoshapuram & Velachery)
6. Branch Churches: Santhoshapuram, Balaji Nagar & Velachery
7. Great Commission Partners (Network of Pastors)
8. Training Programmes – Seminars & Retreats
9. Crusades
10. Literature Distribution and Follow Up
11. Gospel Printing Press - Publications
12. St. Paul's Matriculation School - Village English High School
13. Sunday Schools (Chepauk) : 10.30 a.m. Sunday & (Velachery, Balaji Nagar & Santhoshapuram) 3.00 p.m. Sunday
14. **Early Morning Service : 5.30 a.m. Sunday**
15. **Preliminary Service : 8.00 a.m. Sunday**
16. **Tamil Service : 8.30 a.m. Sunday**
17. **Youth Meeting : 11.00 a.m. Sunday**
18. **Fellowship Lunch : 1.00 p.m. Sunday**
19. **Telugu Service : 4.00 p.m. Sunday**
20. **Hindi Service : 5.00 p.m. Sunday**
21. **Tamil & English Service : 6.00 p.m. Sunday**
22. Feedback Time : 7.30 p.m. Sunday
23. Women's Prayer : 5.30 p.m. Wednesday
24. Hindi Prayer : 7.00 p.m. Wednesday
25. Men's Prayer : 7.30 p.m. Friday
26. Discipleship Meeting : 6.00 p.m. Saturday
27. House Meetings : 6.30 p.m. Tuesday & Thursday
28. Special Holy Communion : 6.00 a.m. 1st day of each month
29. Ministers' Meeting : 5.30 p.m. First Saturday
30. Parents' Prayer : 4.00 p.m. First Sunday
31. Night Prayer : 9.30 p.m. Third Friday
32. Fasting Prayer : 9:30 a.m. Second Saturday
33. Holy Communion : Second Sunday Service
34. Youth / Kid Prayer : 10.00 p.m. daily (over phone)
35. Staff Devotion : 9.00 a.m. daily
36. Office : 9.00 a.m. to 9.00 p.m. (except Sundays)

## Echo of His Call Postal Courses for candidates in India

### 1. BIBLECOR

We offer Postal Course on Basic Truths of The Bible to new Christians and non-Christians in English – 57 pages, Hindi – 76 pages & Tamil – 96 pages. You will get a Course Book entitled **New Life – For You!** **After the completion of this course, you will get a certificate. There will be no compulsory fees. You will be blessed!** - Editor

### 2. THEOLOGICAL CORRESPONDENCE COURSE

Advanced Distance Education called **Theological Correspondence Course** is available in English – 537 pages and Tamil – 652 pages for Pastors, Evangelists, Christian Leaders and for lay people who have passion to do God's Ministry! A fee of Rs. 1000/- is charged. 7 Books with 149 Chapters are supplied. **Certificate in Ministry** will be awarded. **God will bless you!**

***For more details, write to us.***

**The Chairman, Nehemiah Bible College,**
Echo of His Call, **Post Box 2957**
CHEPAUK, CHENNAI - 600 005.

**Ph.: (044) 2852 8282, 2852 9293, 2854 7766,**
**Cell : 98410 71852, 95661 31858**
**E.mail : biblecor@yahoo.co.in**

## A good opportunity to get Echo of His Call monthly magazine at free of cost

If you could send the addresses of your friends / relatives through post, letter, e.mail, WhatsApp or phone to us, we will dispatch **Echo of His Call** monthly magazine to them at free of cost.

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | |
|---|---|
| **Account Name** | : **ECHO OF HIS CALL EDUCATIONAL TRUST** |
| **Account Number** | : **1023 2923 805** |
| **Bank Name** | : **STATE BANK OF INDIA** |
| **Branch** | : **TRIPLICANE, CHENNAI - 600 005** |
| **IFSC Code** | : **SBIN 0000249** |
| **SWIFT Code** | : **SBI NIN BB 455** |



# ಹಳ್ಳದಿಂದ ಅರಮನೆಗೆ
# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರಿಗೆ ಅರ್ಥವಾಗಲಿ." (ಮತ್ತಾಯ **24:15**)

## ನನ್ನ ಕೀಳು ಸ್ಥಿತಿಯನ್ನು ಪರಿಗಣಿಸಿದ ಕರ್ತನು !

ನಾನು ದೀನಾವಸ್ಥೆಯಲ್ಲಿದ್ದಾಗ ನಮ್ಮನ್ನು ನೆನಪು ಮಾಡಿಕೊಂಡನು; ಆತನ ಕೃಪೆಯು ಶಾಶ್ವತವಾದದ್ದು. (ಕೀರ್ತನೆ 136:23)

ನನ್ನ ಸೇವೆಯ ಪ್ರಾರಂಭದ ದಿನಗಳಲ್ಲಿ, ನಾನು ಕೆಲವು ದಿನಗಳ ಕಾಲ ವಿದೇಶದಲ್ಲಿ ನನ್ನ ಸ್ನೇಹಿತನ ಕುಟುಂಬದವರೊಂದಿಗೆ ಉಳಿದುಕೊಂಡಿದ್ದೆ. ಅವರು ನನ್ನ ಎಲ್ಲಾ ಮೂಲ ಅಗತ್ಯತೆಗಳನ್ನು ಒದಗಿಸಿದರು ಮತ್ತು ನನ್ನ ಉಳಿದುಕೊಂಡಿರುವಿಕೆ ಯನ್ನು ಆರಾಮವಾಗಿ ಮಾಡಿಕೊಟ್ಟರು.

ಒಂದು ದಿನ ಸಾಯಂಕಾಲ, ನನ್ನನ್ನು ಉಳಿಸಿಕೊಂಡಿರುವ ಸ್ನೇಹಿತನು ನನ್ನ ಕೋಣೆಗೆ ಬಂದು ಈ ರೀತಿಯಾಗಿ ಹೇಳಿದನು, ನೀನು ಒಂದು ಪ್ರತ್ಯೇಕವಾದ ಅಗತ್ಯತೆಗಾಗಿ ದೇವರ ಹತ್ತಿರ ಪ್ರಾರ್ಥನೆ ಮಾಡುತ್ತಾ ಇದ್ದೀಯಾ ಎಂದು ನನಗೆ ಅನಿಸುತ್ತದೆ. ನಾನು ಗೊತ್ತು ಮಾಡಿಕೊಳ್ಳಬಹುದಾ?

ನೀನು ಅದರ ಬಗ್ಗೆ ನನಗೆ ವಿವರವಾಗಿ ಹೇಳಬಹುದಾ? ಅತನಿಗೆ ನಾನು ಹೀಗೆ ಉತ್ತರಿಸಿದೆನು. ಆತನ ಕರೆಯ ಪ್ರತಿಧ್ವನಿಯ ಪತ್ರಿಕೆಯನ್ನು ನಾವು ಬೇರೆಯವರ ಮುದ್ರಣದಲ್ಲಿ ಮಾಡುತ್ತಾ ಇದ್ದೇವೆ.

ಸಮಯಕ್ಕೆ ಸರಿಯಾಗಿ ಪ್ರಕಟಿಸಲು ನಮಗೆ ತುಂಬಾ ಕಷ್ಟವಾಗುವುದರಿಂದ, ಮುದ್ರಣ ಯಂತ್ರಕ್ಕಾಗಿ ನಾನು ಭಾರದಿಂದ ಪ್ರಾರ್ಥನೆ ಮಾಡುತ್ತಾ ಇದ್ದೇನೆ. ಆ ಒಂದು ಅಗತ್ಯಕ್ಕಾಗಿ ನಾನು ಕೂಡ ಪ್ರಾರ್ಥನೆ ಮಾಡುತ್ತೇನೆ ಎಂದು ಆತನು ಹೇಳಿದನು.

ಮರುದಿನ, ನಾನು ಸೇವೆಗಾಗಿ ಮನೆಯಿಂದ ಹೊರಡಲಿರುವಾಗ, ನನ್ನ ಸ್ನೇಹಿತ ಮತ್ತು ಆತನ ಹೆಂಡತಿ ನನ್ನ ಹತ್ತಿರ ಬಂದರು. ಅವರು ತಮ್ಮ ದಾಖಲೆಗಳನ್ನು ನನಗೆ ತೋರಿಸಿದರು ಅಪ್ಲಿಕೇಶನ್ ಮತ್ತು ಬ್ಯಾಂಕ್‌ಗೆ ಘೋಷಣೆ,ಇದರಲ್ಲಿ ಅವರು ದೊಡ್ಡ ಮೊತ್ತವನ್ನು ಪಡೆಯಲು ತಮ್ಮ ಮನೆಯನ್ನು ಅಡಮಾನ ಇಡಲ್ ನಿರ್ಧರಿಸಿದ್ದರು. ಆದ್ದರಿಂದ ಆತನ ಕರೆಯ ಪ್ರತಿಧ್ವನಿಯ ಸೇವೆಗೆ ಬೇಕಾದ ಯಂತ್ರವನ್ನು ಖರೀದಿಸಲು ಅವರು ಬಯಸಿದರು.

ನಾನು ಆಘಾತಕ್ಕೊಳಗಾದೆ ಮತ್ತು ನನ್ನ ಆತ್ಮದಲ್ಲಿ ವಿಚಲಿತನಾಗಿ ಅವರಿಗೆ ನೀವು ಬ್ಯಾಂಕಿನಲ್ಲಿ ಸಾಲವಾಗಿ ತೆಗೆದುಕೊಂಡ ಹಣವನ್ನು ನಾನು ಸ್ವೀಕರಿಸುವುದಿಲ್ಲ ಎಂದು ದೃಢವಾಗಿ ಹೇಳಿದೆ.

ನನ್ನ ನಡವಳಿಕೆಯನ್ನು ನೋಡಿ ಆ ಕುಟುಂಬವು ಆಶ್ಚರ್ಯಗೊಂಡರು. ಅವರು ನನ್ನನ್ನು ಜಗತ್ತಿನಲ್ಲಿ ಬದುಕಲು ತಿಳಿದಿಲ್ಲದ ವ್ಯಕ್ತಿ ಎಂದು ಲೇಬಲ್ ಮಾಡಿದರು. ಅವರ ಪ್ರಸ್ತಾವವನ್ನು ಸ್ವೀಕರಿಸಲು ನನಗೆ ಮನವರಿಕೆ ಮಾಡುವುದನ್ನು ಮುಂದುವರಿಸಿದರು. ಆದರೆ ನಾನು ನನ್ನ ನಿರ್ಧಾರದಲ್ಲಿ ದೃಢವಾಗಿ ಇದ್ದೆನು ಮತ್ತು ನಿರಂತರವಾಗಿ ಪ್ರಾರ್ಥಿಸಿದೆನು.

ಅನೇಕ ದಿನಗಳ ನಂತರ, ಭಾರತಕ್ಕೆ ಹಿಂದಿರುಗಿ ಬಂದೆನು. ಕರ್ತನು ನನ್ನ ಬಡ ಭಾರತೀಯ ಸ್ನೇಹಿತರ ಹೃದಯವನ್ನು ಪ್ರೇರೇಪಿಸಿದನು ಮತ್ತು ಅವರು ನನಗೆ ಆಗಾಗ ಕೊಟ್ಟ ಕಾಣಿಕೆಗಳಿಂದ ನಾನು ಉತ್ತಮ ಆಫ್‌ಸೆಟ್ ಯಂತ್ರವನ್ನು ಖರೀದಿಸಲು ಸಾಧ್ಯವಾಯಿತು.

ಕರ್ತನು ಒಳ್ಳೆಯವನು ಎಂದು ನಾನು ರುಚಿಸಿ ಮತ್ತು ಅನುಭವಿಸಿದೆನು. (ಕೀರ್ತನೆ 34:8). ಜ್ಞಾನೋಕ್ತಿಗಳು 28:20 ರ ಪ್ರಕಾರ ಕರ್ತನ ಕೃಪೆಯು ನನ್ನನ್ನು ಎತ್ತಿ ಹಿಡಿಯುತ್ತದೆ. ನಂಬಿಗಸ್ತನು ಆಶೀರ್ವಾದ ಪೂರ್ಣನಾಗುವನು.

ಆತನ ಕರೆಯ ಪ್ರತಿಧ್ವನಿಯು ಸೇವೆಗೆ ಯಾವುದೇ ಕ್ರಮವಾದ ಆದಾಯವಿಲ್ಲ. ನಿರ್ದಿಷ್ಟ ಆದಾಯವಿಲ್ಲ, ಆತನಲ್ಲಿ ನಮ್ಮ ನಂಬಿಕೆಯ ಮೂಲಕ ನಮ್ಮ ಎಲ್ಲಾ ಅಗತ್ಯತೆಗಳನ್ನು ಪೂರೈಸಿದ್ದಾನೆ. ಎಲ್ಲಾ ದೇವರಿಗೆ ಸ್ತೋತ್ರ ಮತ್ತು ಮಹಿಮೆಯುಂಟಾಗಲಿ. ಆಮೆನ್.

*************

(6ನೇ ಪುಟದಿಂದ)

## ಬ) ತಿದ್ದುಪಡಿಯ ನಿರಾಕರಣೆ!

ಮುಂಚೆ, ಅಮಚ್ಯನು ತಿದ್ದುಪಡಿಯನ್ನು ಸ್ವೀಕರಿಸಿದನು. ಈಗ, ಗರ್ವದಿಂದ ತುಂಬಿದ್ದಾನೆ. ಅವನು ನಿರಾಕರಿಸಿದನು.

ನಿನ್ನ ಕೈಯಿಂದ ತಮ್ಮ ಜನರನ್ನು ತಪ್ಪಿಸಲಾರದೆ ಹೋದ ಅನ್ಯದೇವತೆಗಳಲ್ಲಿ ಭಕ್ತಿಯನ್ನೇಕೆ ಇಟ್ಟಿದ್ದೀ? (2 ಪೂರ್ವಕಾಲ 25:19).

ಅಮಚ್ಯನು ಕ್ರೂರವಾಗಿ ಉತ್ತರಿಸಿದನು. ನಿನ್ನನ್ನು ರಾಜಮಂತ್ರಿಯನ್ನಾಗಿ ನೇಮಿಸಿದ್ದೇವೋ? (2 ಪೂರ್ವ ಕಾಲ 25 : 16).

ಎಂತಹ ವ್ಯತ್ಯಾಸ ಆತನ ನಡುವಳಿಕೆಯಲ್ಲಿ! ದೇವರ ತಿದ್ದುವಿಕೆಯನ್ನು ನಿಲ್ಲಿಸದ್ದಕ್ಕೆ ತಕ್ಷಣವೆ ನಾವು ವಿನಾಶದ ಕಡೆಗೆ ನಮ್ಮ ಯೋಗ್ಯತೆಯನ್ನು ಪ್ರಾರಂಭಿಸುತ್ತೇವೆ.

ಅನುಕೂಲವಾದಾಗ ಅವನು ವಿಧೇಯ ನಾದನು. ಆದರೆ ವಿಧೇಯತೆಯು ಅನಾನುಕೂಲ ವಾದಾಗ, ಅವನು ನಿರಾಕರಿಸಿದನು. ನಮ್ಮನ್ನು ಮೊದಲು ನಾಶಪಡಿಸುವುದು ಪಾಪವಲ್ಲ, ಇದು ದೇವರ ತಿದ್ದುಪಡಿಯನ್ನು ಸ್ವೀಕರಿಸಲು ನಿರಾಕರಿಸುವುದು. ಈ ವರ್ಷದಲ್ಲಿ ನನ್ನ ಪ್ರಾರ್ಥನೆ ಏನೆಂದರೆ ದೇವರು ನಮಗೆ ಪ್ರತಿ ಹೆಜ್ಜೆಯಲ್ಲಿ ಆತನ ಧ್ವನಿಯನ್ನು ಕೇಳಲು ಮತ್ತು ಆತನ ಮಾರ್ಗಗಳಲ್ಲಿ ನಿಷ್ಠೆಯಿಂದ ನಡೆಯಲು ಸಹಾಯ ಮಾಡಲಿ.

ನೀವು ಬಲಕ್ಕಾಗಲಿ ಎಡಕ್ಕಾಗಲಿ ತಿರುಗಿ ಕೊಳ್ಳುವಾಗ ಇದೇ ಮಾರ್ಗ, ಇದರಲ್ಲೇ ನಡೆಯಿರಿ ಎಂದು ನಿಮ್ಮ ಹಿಂದೆ ಆಡುವ ಮಾತನ್ನು ನಿಮ್ಮ ಕಿವಿಗೆ ಬೀಳುವುದು. ಯೆಶಾಯ 30:21.

ಎಲ್ಲದಕ್ಕಿಂತ ಹೆಚ್ಚಾಗಿ, ಸಂಪೂರ್ಣವಾಗಿ ಒಪ್ಪಿಸಿಕೊಡುವುದಕ್ಕೆ ನಾವು ಕಲಿಯಬೇಕು. ಆತನು ನಡೆಸುವ ಧ್ವನಿಗೆ ವಿಧೇಯರಾಗಬೇಕು.

## ರಾಜಿಯು ಗರ್ವ, ವಿರೋಧ, ಕುರುಡುತನಕ್ಕೆ ನಡೆಸುತ್ತದೆ!

ರಾಜಿಯು ಅಪಾಯಕಾರಿ ಸರಣಿ ಪ್ರತಿಕ್ರಿಯೆ ಯನ್ನು ಉಂಟುಮಾಡುತ್ತದೆ :

- ಗರ್ವ
- ವಿಗ್ರಹಾರಾಧನೆ
- ಸಲಹೆಯ ನಿರಾಕರಣೆ
- ಸ್ವಂತಕ ಭರವಸೆ
- ಎಚ್ಚರಿಕೆಗಳನ್ನು ತಿರಸ್ಕರಿಸುವುದು
- ಮೂರ್ಖತನದ ತೀರ್ಮಾನಗಳು

ಸಮರ್ಪಣೆ ಇಲ್ಲದ ಒಪ್ಪಿಸಿಕೊಡುವಿಕೆಯು ರಾಜಿಗೆ ನಡೆಸುತ್ತದೆ.

## 3. ಪರಿಣಾಮಗಳು !

ನೀವು ಏನು ಒಪ್ಪಿಸಿಕೊಡುವುದಿಲ್ಲವೋ ಅದು ನಿಮ್ಮನ್ನು ನಾಶಪಡಿಸುತ್ತದೆ!

2 ಪೂರ್ವಕಾಲ ವೃತ್ತಾಂತ 25:17-28

### ಅ) ದೇವರು ಅಧಿಕಾರ ನೀಡದ ಯುದ್ಧ!

ತನ್ನ ಸಫಲತೆಯಿಂದ ಗರ್ವ, ಅಮಚ್ಯನು ಇಸ್ರಾಯಲ್ಯರ ಅರಸನಿಗೆ ಯುದ್ಧಕ್ಕೆ ಸವಾಲು ಹಾಕಿದನು. ದೇವರು ಅವನ ಸಂಗಡ ಇರಲಿಲ್ಲ, ಸಫಲತೆಯು ದೇವರ ವರವಾಗಿದೆ ಎಂದು ಅವನು ಊಹಿಸಿಕೊಂಡನು. ಇಸ್ರಾಯೇಲ್ಯರ ಅರಸನು ಅವನಿಗೆ ಸಾಮ್ಯದ ಮೂಲಕವಾಗಿ ಎಚ್ಚರಿಸಿದನು ಆದರೆ ಅಮಚ್ಯನು ತಿರಸ್ಕರಿಸಿದನು. ಯಾವಾಗ ವ್ಯಕ್ತಿಯ ಹೃದಯವು ದೇವರಿಗೆ ಒಪ್ಪಿಸಿ ಕೊಡುವದಿಲ್ಲವೋ ಅವನು ಕೇಳಿಸಿ ಕೊಳ್ಳುವುದನ್ನು ನಿಲ್ಲಿಸುತ್ತಾನೆ. ದೇವರು ಯಾರನ್ನು ಕಳುಹಿಸುತ್ತಾನೋ ಅವನನ್ನು ಕೂಡ.

### ಬ) ಬುದ್ಧಿಯ ಎಚ್ಚರಿಕೆಗಳನ್ನು ತಿರಸ್ಕರಿಸುವುದು !

ಅಮಚ್ಯನ ಗರ್ವವನ್ನು ವೈರಿಗಳು ಕೂಡ ಗುರುತಿಸಿದರು.

ನೀನು ಹೆಮ್ಮೆಗೊಂಡಿದ್ದೀ; ಸುಮ್ಮನೆ ಮನೆಯಲ್ಲಿ ಕೂತುಕೊಳ್ಳಬಾರದೇ (2 ಪೂರ್ವಕಾಲ 25:19).

ಅಹಂಕಾರವು ನಮ್ಮನ್ನು ಸತ್ಯಕ್ಕೆ ಕುರುಡಾಗಿಸಿದಾಗ ನಾವು ಸಾಮಾನ್ಯ ಜ್ಞಾನವನ್ನು ಸಹ ಕೇಳುವುದನ್ನು ನಿಲ್ಲಿಸುತ್ತೇವೆ. ಈ ಮೂರ್ಖತನದಿಂದ ಕರ್ತನು ನಮ್ಮನ್ನು ತಡೆಯಲಿ.

### ಸಿ) ಅಮಚ್ಯನ ಸಂಪೂರ್ಣ ಕುಸಿತ !

ರಾಜಿಯ ಕಾರಣದಿಂದ :



- ಆತನ ಸೈನ್ಯವು ಸೋತು ಹೋಯಿತು.
- ಯೆರುಸಲೇಮು ಗೋಡೆಯು ಮುರಿದು ಬಿತ್ತು.
- ದೇವಾಲಯವು ಲೂಟಿಯಾಯಿತು.
- ಅವನು ಬಂಧಿಸಲ್ಪಟ್ಟನು.
- ಅವನ ಜೀವನವು ಅವಮಾನ ಮತ್ತು ಪಿತೂರಿಯಲ್ಲಿ ಕೊನೆಗೊಂಡಿತು.

ಸಮರ್ಪಣೆಯಿಂದ ಪ್ರಾರಂಭಿಸಿದ ಮನುಷ್ಯನು ಸಂಪೂರ್ಣವಾಗಿ ಮುರಿಯಲ್ಪಟ್ಟ ದರಿಂದ ಕೊನೆಗೊಂಡಿತು.

ಯಾಕೆ?

ಕಾರಣ ಆತನು ಸರಿಯಾಗಿ ಮಾಡಿದನು ಆದರೆ-ಯಥಾರ್ಥ ಹೃದಯದಿಂದ ಅಲ್ಲ,

ಸಣ್ಣ ರಾಜಿಗಳ ಮೂಲಕವಾಗಿ ಅವರು ನಿಧಾನವಾಗಿ ಬಳುತ್ತಾರೆ.

ಸಮರ್ಪಣೆ - ರಾಜಿ - ಪರಿಣಾಮ

ಅಂತಿಮ ಕರೆ :

### ಸಂಪೂರ್ಣ ಒಪ್ಪಿಸಿಕೊಳ್ಳುವಿಕೆಯನ್ನು ಆರಿಸಿಕೊಳ್ಳುವುದು !

ಪ್ರೀತಿಯ ಸ್ನೇಹಿತರೇ, ದೇವರು ಪರಿಪೂರ್ಣತೆಯನ್ನು ಬೇಡುವುದಿಲ್ಲ. ಆದರೆ ಆತನು ಪೂರ್ಣ ಹೃದಯ ಭಕ್ತಿಗೆ ಕರೆಯುತ್ತಾನೆ.

- ಒಳ್ಳೆಯತನಕ್ಕೆ ಸಮರ್ಪಣೆ
- ಭಾಗಶಃ ಒಪ್ಪಿಸಿಕೊಳ್ಳುವಿಕೆ ಅಪಾಯಕಾರಿ
- ರಾಜಿಯು ಬೆಳೆಯುತ್ತದೆ
- ಪರಿಣಾಮಗಳು ಹಿಂಬಾಲಿಸುತ್ತವೆ.

ಪ್ರೀತಿ ಮತ್ತು ದಯೆಯಿಂದ, ದೇವರು ನಮ್ಮನ್ನು ಕರೆಯುತ್ತಾನೆ :

ನಿಮ್ಮನ್ನು ರಕ್ಷಿಸಲು ಸಾಧ್ಯವಾಗದ ಕಡೆಗೆ ಯಾಕೆ ತಿರುಗಬೇಕು?

ಹಿಂತಿರುಗಿ ಬನ್ನಿರಿ, ಸಂಪೂರ್ಣವಾಗಿ ಒಪ್ಪಿಸಿಕೊಡಿರಿ

ನಾವು ಸಂಪೂರ್ಣ ಒಪ್ಪಿಸಿಕೊಡುವಿಕೆಯ ಜೀವಿತವನ್ನು ಜೀವಿಸಬೇಕೆಂದು ಯೇಸು ಶಿಲುಬೆಯಲ್ಲಿ ನನಗಾಗಿ ಮತ್ತು ನಿನಗಾಗಿ ಜೀವವನ್ನು ಕೊಟ್ಟನು.

ಹಿಂತಿರುಗಿ ಬನ್ನಿರಿ, ಸಂಪೂರ್ಣವಾಗಿ ಒಪ್ಪಿಸಿಕೊಡಿರಿ.

ದೇವರ ಕಡೆಗೆ ಹಿಂತಿರುಗಿರಿ-ಆತನು ಅಂಗಲಾಚಿ ಕಾಯುತ್ತಾ ಇದ್ದಾನೆ. ಅಮಚ್ಯನನ್ನು ದಾರಿತಪ್ಪಿಸಿದ ಜಾರು ಹಾದಿಯಲ್ಲಿ ನಡೆಯದಿರಲಿ. ಇದೇ ಕಾರಣಕ್ಕಾಗಿ ಕ್ರಿಸ್ತನು ಲೋಕಕ್ಕೆ ಬಂದನು ಮತ್ತು ಕಲ್ವಾರಿ ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ಅರ್ಪಿಸಿದನು. ನಿನ್ನನ್ನು ಮತ್ತು ನನ್ನನ್ನು ವಿಮೋಚಿಸುವುದಕ್ಕಾಗಿ.

### ನಾವು ಪ್ರತಿಬಿಂಬಿಸೋಣ !

- ನಾವು ಕೆಲವು ಪ್ರದೇಶಗಳಲ್ಲಿ ಸಮರ್ಪಿಸಿ ಕೊಂಡಿದ್ದೇವಾ. ಆದರೆ ಕೆಲವು ಪ್ರದೇಶಗಳಲ್ಲಿ ರಾಜಿ ಮಾಡಿಕೊಂಡಿದ್ದೇವಾ?
- ಯಾವ ಎತ್ತರದ ಸ್ಥಳಗಳನ್ನು ನಾವು ಕೆಡವಲಿಲ್ಲ-ಕಹಿ, ಗುಪ್ತ ಅಭ್ಯಾಸಗಳು, ದುಶ್ಚಟಗಳು?
- ನಮ್ಮ ಹೃದಯದ ಯಾವ ಭಾಗವು ದೇವರಿಗೆ ಸಂಪೂರ್ಣವಾಗಿ ನಿಷ್ಠೆಯಾಗಿಲ್ಲ?

ನಿಷ್ಠಾವಂತ ಹೃದಯದಿಂದ ಕರ್ತನ ದೃಷ್ಟಿಯಲ್ಲಿ ಸರಿಯಾದದ್ದನ್ನು ಮಾಡುತ್ತಾ 2026 ಅನ್ನು ಮುಗಿಸಲು ಶ್ರಮಿಸುವದಕ್ಕೆ ನಾನು ಪ್ರಾರ್ಥನೆ ಮಾಡುತ್ತೇನೆ.

**NOTICE**

Please store the Mobile Phone numbers (+91) 98410 71858, (+91) 98412 71858 of Pastor S. Sam Selva Raj on your mobile phones.

\- Editor

Posted at "Egmore RMS Patrika Channel" RNI NO. 70107/98, Postal Regn. No. TN/CH (C)/195/24-26 WPP NO. TN/PMG(CCR)/WPP-219/24-26

## OUR BANK DETAILS:

### *1. Bank : State Bank of India*

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

### *2. Bank : ICICI Bank*

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

### *3. Bank : State Bank of India*

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

## OUR QR CODE:

ECHO OF HIS CALL

Scan to pay with any UPI app

**Google Pay: 98410 71858**
**PayPal : SAM SELVA RAJ**

*****

**E.mail : sam@echoofhiscall.org**

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

**Annual Subscription : Rs. 100/-** **Life Subscription : Rs. 2000/-**

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :
**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.org

**YOU CAN SEND YOUR DONATION ONLINE ALSO**

RNI NO. 70107/98
Postal Regn. No. TN/CH/(C)/195/24-26
WPP NO. TN/PMG(CCR)/WPP- 219/24-26
Date of Publication: Second week of every month
Date of Posting : 9th & 10th of every month
Posted at "Egmore RMS Patrika Channel"
on 10th FEBRUARY 2026.
If un-delivered please return to:
**ECHO OF HIS CALL (KANNADA)**
P.O. Box No. 2957,
Chepauk, Chennai - 600 005, INDIA.
Phone: (+ 91- 44) 2852 8282, 2852 9293, 2854 7766

## *JESUS LOVES YOU!*

To

*GOD BLESS YOU!*

Owned and published by **S. Sam Selva Raj** from New No. 8 & 10, Old No.18 & 19, Mohammed Abdullah 2nd Street, Chepauk, Chennai-600 005 and printed by **S. Sam Selva Raj** at **Echo of His Call Printers,** New No. 8 & 10, Old No.18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**